<u>ದಿನಾಂಕ **11-07-2025** ರಂದು ಪಿ.ಡಬ್ಲೂ- **1**ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ**1, 2, 4** ರಿಂದ **6**ನೇ ಪ್ರತಿವಾದಿ ಪರ ಶ್ರೀ.ಡಿ ಟಿ ಬಿ ವಕೀಲರಿಂದಃ-</u>

1. ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ವಾದ ಪತ್ರ ಸಿದ್ಧಪಡಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಪ್ರಸ್ತುತ ದಾವೆಯಲ್ಲಿ ನಾನು ಒಂದು ಮುಟೇಶನ್ ನಕಲನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರಸ್ತುತ ದಾವೆಯಲ್ಲಿ ನಾನು ಹಾಜರುಪಡಿಸಿರುವ ದಾಖಲೆಗಳನ್ನು ನಾನು ಮತ್ತು ನನ್ನ ತಾಯಿ ಸಂಬಂಧಪಟ್ಟ ಇಲಾಖೆಗಳಿಂದ ಪಡೆದಿರುತ್ತೇವೆ. ದಾವೆಯಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ಹೊರತುಪಡಿಸಿ ನಾನು ಬೇರೆ ದಾಖಲೆಗಳನ್ನು ಸಂಬಂಧಪಟ್ಟ ಇಲಾಖೆಗಳಿಂದ ಪಡೆದಿರುವುದಿಲ್ಲ. ದಾವಾ ಜಮೀನುಗಳ ದಾಖಲೆಗಳಲ್ಲಿ ಪ್ರತಿವಾದಿಯರ ಹೆಸರುಗಳು ನಮೂದು ಇರುತ್ತವೆ ಎಂದರೆ ಸರಿ. ಪ್ರತಿವಾದಿಯರ ಹೆಸರಿಗೆ ಯಾವಾಗ ವರ್ಗಾವಣೆಯಾಗಿರುತ್ತವೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುತ್ತೀರಾ ? ಎಂಬ ಪ್ರಶ್ನೆಗೆ ಸಾಕ್ಷಿಯು ಎಲ್ಲಾ ಉತಾರಗಳನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ.

2. ಪ್ರತಿವಾದಿಯರು ತಮ್ಮ ಹಿಸ್ಸೆಗನುಗುಣವಾಗಿ ಸೊಸೈಟಿಗಳಲ್ಲಿ ದಾವಾ ಸ್ವತ್ತುಗಳ ಮೇಲೆ ಸಾಲ ಪಡೆದಿರುತ್ತಾರೆ ಎಂದರೆ ಸಾಕ್ಷಿಯು ಅವರು ನನಗೆ ಗೊತ್ತಾಗದ ಹಾಗೆ ಸಾಲ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಓ ಎಸ್ ನಂ.64/2020 ದಾವೆಯಲ್ಲಿ ನಾನು ಹಾಜರಾಗಿದ್ದೆ. ಸದರಿ ದಾವೆಗೆ ಬೇಕಾದ ದಾಖಲೆಗಳನ್ನು ನನ್ನ ತಾಯಿ ತೆಗೆಸಿರುತ್ತಾರೆ. ನಾನು ಬ್ಯಾಂಕ್ ಮತ್ತು ಸೊಸೈಟಿಗಳಿಗೆ ಪ್ರತಿವಾದಿಯರ ವಿರುದ್ಧ ತಕರಾರನ್ನು ಕೊಟ್ಟಿರುವುದಿಲ್ಲ. 5 ಮತ್ತು 6ನೇ ಪ್ರತಿವಾದಿಯರು ನನ್ನ ತಂಗಿಯರು ಇರುತ್ತಾರೆ. 7ನೇ ಪ್ರತಿವಾದಿ ನನ್ನ ತಾಯಿ ಇರುತ್ತಾರೆ.

3. ನನ್ನ ತಂದೆಯ ಮರಣಾನಂತರ 1986 ರಲ್ಲಿ ನಾನು ಮತ್ತು ಎಲ್ಲ ಪ್ರತಿವಾದಿಯರು ಸೇರಿ ದಾವಾ ಜಮೀನುಗಳನ್ನು ನಮ್ಮ ಹೆಸರಿಗೆ ವರ್ಗಾವಣೆ ಮಾಡಿಕೊಳ್ಳಲು ಸಂಬಂಧಪಟ್ಟ ಇಲಾಖೆಗೆ ಅರ್ಜಿ ಸಲ್ಲಿಸಿದ್ದೆವು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು, 5 ರಿಂದ 7ನೇ ಪ್ರತಿವಾದಿಯರು ಸೇರಿ ಎಲ್ಲ ದಾವಾ ಸ್ವತ್ತುಗಳನ್ನು 1 ರಿಂದ 4ನೇ ಪ್ರತಿವಾದಿಯರ ಹೆಸರಿಗೆ ವರ್ಗಾವಣೆ ಮಾಡಲು ನಮ್ಮ ತಕರಾರು ಇರುವುದಿಲ್ಲ ಎಂದು ಲಿಖಿತ ಅರ್ಜಿಯನ್ನು ತಹಶೀಲ ಕಾರ್ಯಾಲಯಕ್ಕೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು, ನನ್ನ ಸಹೋದರಿಯರು ಮತ್ತು

ನನ್ನ ತಾಯಿ ಒಪ್ಪಿಗೆಯ ಮೇರೆಗೆ 1997 ರಲ್ಲಿ ಎಲ್ಲಾ ದಾವಾ ಸ್ವತ್ತುಗಳನ್ನು 1 ರಿಂದ 4ನೇ ಪ್ರತಿವಾದಿಯರ ಹೆಸರಿಗೆ ವರ್ಗಾವಣೆ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ.

4. ಹನುಮಂತ ತಂದೆ ಮಹಾದೇವ ಕೋಣೆಗೋಳ ಇವರು ನನ್ನ ದೊಡ್ಡಪ್ಪನ ಮಗ ಇರುತ್ತಾನೆ. ಸದರಿ ಹನುಮಂತ ಈತನು ತನ್ನ ಹಿಸ್ಸೆಗೆ ಬಂದಿರುವ ಜಮೀನು ಸರ್ವೆ ನಂ.97/3 ಕ್ಷೇತ್ರ 1 ಎಕರೆ 20 ಗುಂಟೆ ಜಮೀನನ್ನು 3 ಮತ್ತು 4ನೇ ಪ್ರತಿವಾದಿಯರಿಗೆ ಬಿಟ್ಟು ಕೊಟ್ಟಿರುತ್ತಾನೆ ಎಂದರೆ ಸರಿಯಲ್ಲ. ಸದರಿ ಪ್ರತಿವಾದಿಯರು ಮೇಲೆ ಹೇಳಿದ ಜಮೀನಿನಲ್ಲಿ ತಲಾ ಅರ್ಧ ಹಿಸ್ಸೆ ಪಡೆದು ಕಬ್ಜೆಯಲ್ಲಿರುತ್ತಾರೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರುತ್ತಾರೆ, ಆದ್ದರಿಂದ ಸಾಕ್ಷಿಯ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)
ಓ. ಹೇ. ಕೇ. ಸರಿ ಅದೆ.

RAJASHEKHAR
Digitally signed by RAJASHEKHAR
Date: 2025.07.14 10:48:42 +0530

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಮ್.ಎಫ್.ಸಿ. ಜಮಖಂಡಿ